

ಪ್ರಾಣವಾಯು ಕೊಡ್ತೀನಿ ಅಜ್ಜ... ಉಸಿರಾಡು

# ಕಮೂ ಕಂಡಂತೆ ಕೋವಿಡ್ ಕಾಲಕನ್ನಡಿ

ಕ್ವಾರಂಟೈನ್‌ನಲ್ಲಿ ಇರುವುದು ಜೈಲುಶಿಕ್ಷೆಯನ್ನು ಅನುಭವಿಸಿದಷ್ಟೇ ಕಠಿಣವಾಯಿತು. ಆಸ್ಪತ್ರೆಯವರು ತಿಂಡಿ ಕೊಟ್ಟಾಗ ತಿನ್ನುವುದು, ಮಿಕ್ಕ ಸಮಯದಲ್ಲಿ ಕಾಟ್ ಮೇಲೆ ಹಾಗೇ ಬಿದ್ದುಕೊಂಡಿರುವುದು – ಇಂತಹ ಸೆರೆವಾಸವನ್ನು ಅವರಿಗೆ ಸಹಿಸಲಾಗಲಿಲ್ಲ. ಹಲವು ಆಸ್ಪತ್ರೆಗಳಲ್ಲಿ ಪೇಷಂಟ್‌ಗಳನ್ನು ನೋಡಲು ವೈದ್ಯರು ಬರುತ್ತಲೇ ಇರಲಿಲ್ಲ. ನರ್ಸ್‌ಗಳೂ ದೂರದಿಂದಲೇ ಮಾತ್ರೆ ಇಟ್ಟು ಹೋಗುತ್ತಿದ್ದರು. ಕೆಲವರು ಪೇಷಂಟ್ ಬಾಯಿಗೆ ಮಾತ್ರೆ ಹಾಕಲು ಉದ್ದನೆಯ ಕೊಳವೆ ಇಟ್ಟುಕೊಂಡಿದ್ದರು (ತಾಹು ಇದೇ ವಾಕ್ಯ ಬಳಸಿದ್ದಾನೆ). ಇಲ್ಲಿಯೇ ಇದ್ದರೆ ಸಾವೇ ಗತಿ ಎಂದು ಹಲವರು ಕ್ವಾರಂಟೈನ್ ಕೇಂದ್ರದಿಂದ ತಪ್ಪಿಸಿಕೊಂಡು ಓಡಿದರು. ಪೊಲೀಸರು ಅವರ ಬೆನ್ನುಬಿದ್ದರು. ಎಫ್‌ಐಆರ್ ಅನ್ನೂ ದಾಖಲಿಸಿದರು. ಇನ್ನು ಕೆಲವರು, 'ಹೇಗೂ ಸಾಯುವುದೆಂದಾದ ಮೇಲೆ ಕಾಯುವುದೇಕೆ' ಎಂದು ತಮ್ಮನ್ನು ಕೂಡಿಹಾಕಿದ್ದ ಕಟ್ಟಡದ ಮೇಲಿನ ಮಹಡಿಯಿಂದಲೇ ಬಿದ್ದು ಆತ್ಮಹತ್ಯೆ ಮಾಡಿಕೊಂಡರು. ಸೋಂಕು ಅಷ್ಟಾಗಿ ಬಾಧಿಸದಿದ್ದರೂ ಏಕಾಂತವಾಸ ಅವರನ್ನು ಹುಚ್ಚರನ್ನಾಗಿ ಮಾಡಿತ್ತು.

'ನಗರದಲ್ಲಿ ಮೊದಮೊದಲು ಅತ್ಯಧಿಕ ಕೇಸುಗಳು ದಾಖಲಾಗಿದ್ದು ಪಾದರಾಯನಪುರದಲ್ಲಿ. ಅದು ಹೆಚ್ಚಾಗಿ ಮುಸ್ಲಿಮರು ಇರುವ ದಟ್ಟ ಜನಸಾಂದ್ರತೆಯ ಪ್ರದೇಶ. ಸೋಂಕಿತರು ಹೆಚ್ಚಿದ್ದರಿಂದ ಆ ಪ್ರದೇಶವನ್ನು ಸೀಲ್‌ಡೌನ್ ಮಾಡಲಾಯಿತು. ಸೋಂಕಿತರು ಹಾಗೂ ಅವರ ಸಂಬಂಧಿಗಳನ್ನು ಕ್ವಾರಂಟೈನ್ ಮಾಡಲು ಹೋದ ಕೊರೊನಾ ವಾರಿಯರ್‌ಗಳ ಮೇಲೆ ಹಲ್ಲೆ ನಡೆಯಿತು. ಕೆಲವರ ಕುಮ್ಮಕ್ಕು ಬೇರೆ ಇದರ ಹಿಂದಿತ್ತು. ಹಲ್ಲೆ ಮಾಡಿದವರನ್ನು ಮಾತ್ರವಲ್ಲದೆ ಓಣಿಯ ಮತ್ತಷ್ಟು ನಿವಾಸಿಗಳನ್ನೂ ಪೊಲೀಸರು ಅಟ್ಟಾಡಿಸಿ ಬಾರಿಸಿದರು.

'ದೇಶ ವಿಭಜನೆಯ ಸಂದರ್ಭದಲ್ಲೂ ನಡೆದಿರದಷ್ಟು ಮಹಾವಲಸೆಯು ಈಗ ನಡೆಯಿತು. ವಲಸೆ ಕಾರ್ಮಿಕರಿಗೆ ಎಷ್ಟೊಂದು ಧಾವಂತವೆಂದರೆ, ನೂರಾರು ಕಿಲೋಮೀಟರ್ ದೂರದ ತವರಿಗೆ ನಡೆದುಕೊಂಡೇ ಹೊರಟರು. ಎಷ್ಟೋ ಜನ ದಾರಿಯಲ್ಲಿ ಹಸಿವಿನಿಂದ ಸತ್ತರು. ಕೆಲವರು, ಸಾವಿರಾರು ಕಿಲೋಮೀಟರ್ ದೂರದ ಊರನ್ನು ತಲುಪಲು ಸೈಕಲ್ ಏರಿದರು. ಸಿಕ್ಕ ಸಿಕ್ಕ ಲಾರಿ, ಟ್ಯಾಂಕರ್ ಹತ್ತಿದವರಿಗೂ ಲೆಕ್ಕವಿಲ್ಲ. ಟ್ಯಾಂಕರ್‌ನಲ್ಲಿ ಇಳಿದು ಕುಳಿತವರು ಉಸಿರುಕಟ್ಟಿ ಪ್ರಾಣ ಕಳೆದುಕೊಂಡರು. ಊರಿಗೆ ಹೋಗಲಾಗದವರು ಇದ್ದ ಸ್ಥಳದಲ್ಲೇ ಕಣ್ಣೀರಾದರು. ಬೆಂಗಳೂರಿನಿಂದ ಊರಿಗೆ ವಾಪಸ್ ಬಂದವರನ್ನು ರಕ್ತಸಂಬಂಧಿಗಳೇ ಮನೆಯಿಂದ ಹೊರಗಿಟ್ಟರು (ಸ್ವತಃ ತಾಹು ಕೆಲವು ವಲಸಿಗರ ಊರುಗಳಿಗೆ ಹೋಗಿ ಬಂದಿದ್ದ). ಹೌದು, ಮಾನವ ಚರಿತ್ರೆಯಲ್ಲಿ ಕರಾಳ ಅಧ್ಯಾಯ ಸೇರ್ಪಡೆಯಾದ ದಿನಗಳಿವು...' ತಾಹು, ಟಿಪ್ಪಣಿಯಲ್ಲಿದ್ದ ಕೊನೆಯ ಸಾಲನ್ನು ಸಿಟ್ಟಿನಿಂದಲೇ ಬರೆದಂತಿದ್ದ. ಆ ವಾಕ್ಯ ಬರೆಯುವಾಗ ಪೆನ್ನಿನ ಮೇಲೆ ಒತ್ತಡ ಬಿದ್ದಿರುವುದು ಸ್ಪಷ್ಟವಾಗಿತ್ತು.

ಈ ಮಧ್ಯೆ, ತಾಹು ವಾಟ್ಸ್‌ಆ್ಯಪ್‌ನಲ್ಲಿ ಬಂದ ವಿಡಿಯೊವೊಂದನ್ನು ಡಾ. ರಿಯೂ ಅವರಿಗೆ ತೋರಿಸಿದ. ಅದರಲ್ಲಿ ಸ್ವಾಮೀಜಿಯೊಬ್ಬರು, 'ಭಕ್ತರೇ, ಇಂದು ಬಹುದೊಡ್ಡ ವಿಪತ್ತು ಬಂದಿದೆ. ಇಂತಹ ವಿಪತ್ತನ್ನು ಅನುಭವಿಸಲು ಮನುಕುಲ ಅರ್ಹವಾಗಿದೆ. ಏಕೆಂದರೆ, ಇದು ಮಾನವನ

